**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡ ರವರ ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ:16ಕ್ಕೆ ಉತ್ತರ**

**ಪ್ರಶ್ನೆ:**

ಭಾರತ ಸರ್ಕಾರವು ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ರಾಜ್ಯದಲ್ಲಿನ ಜನರಿಗೆ ಆಧಾರ್ ಕಾರ್ಡು ನೀಡುತ್ತಿರುವುದು ಉತ್ತಮವಾದ ಯೋಜನೆಯಾಗಿರುತ್ತದೆ. ಆದರೆ ಸದರಿ ಯೋಜನೆಯ ನ್ಯೂನತೆಗಳು ಸರ್ಕಾರದ ಗಮನಕ್ಕೆ ಬರದಿರುವುದೇ ದುರದೃಷ್ಟಕರ. ಇದರಿಂದ ಬಡವರಿಗೆ ಆಗುವ ತೊಂದರೆ ಹೇಳತೀರದು. ಕನ್ನಡದಲ್ಲಿ ಮತ್ತು ಆಂಗ್ಲ ಭಾಷೆಯಲ್ಲಿ ಹೆಸರು ಮತ್ತು ವಿಳಾಸವನ್ನು ನಮೂದಿಸಿದಾಗ ಒಂದಕ್ಕೊಂದು ತಾಳೆ ಇರುವುದಿಲ್ಲ. ಇದಕ್ಕೆಲ್ಲಾ ಜವಾಬ್ದಾರರು ಯಾರು?

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಕಸಬಾ ಹೋಬಳಿಯ, ಎಸ್.ಕೊಡಗೀಹಳ್ಳಿ ಗ್ರಾಮವಿದ್ದು, ಇದರ ಪಿನ್ ಕೋಡ್ 572213 ಆಗಿರುತ್ತದೆ. ಜನರು ಆಧಾರ್‌ನಲ್ಲಿ ನಮೂದಿಸುವಾಗ ಎಸ್.ಕೊಡಗೀಹಳ್ಳಿ ಬರುವುದಿಲ್ಲ, ಅದರ ಬದಲಾಗಿ ಸಿ ಕೊಡಗೀಹಳ್ಳಿ ಎಂದು ಬರುತ್ತದೆ. ಕಸಬಾ ಹೋಬಳಿ ಬದಲಿಗೆ ಚಂದ್ರಶೇಖರ ಪುರ ಹೋಬಳಿ ಬರುತ್ತದೆ. ಇದರಿಂದ ಅಲ್ಲಿನ ಜನರಿಗೆ ಬ್ಯಾಂಕ್ ವ್ಯವಹಾರ ಹಾಗೂ ಇತರೆಗಳಿಗೆ ತುಂಬಾ ತೊಂದರೆಯಾಗಿರುತ್ತದೆ. ಸರ್ಕಾರ ಇದರ ಬಗ್ಗೆ ತುರ್ತು ಗಮನ ಹರಿಸಿ ಈ ಸಮಸ್ಯೆಯನ್ನು ಪರಿಹರಿಸಿ ಜನರಿಗೆ ಅನುಕೂಲ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

**ಉತ್ತರ:**

ಭಾರತ ದೇಶದ ಎಲ್ಲಾ ನಿವಾಸಿಗಳಿಗೆ ವಿಶಿಷ್ಟ ಗುರುತು ಸಂಖ್ಯೆಯನು ನೀಡುವುದು ಮಹತ್ವಾಕಾಂಕ್ಷಿಯ ಗುರಿಯಾಗಿದ್ದು, ಭಾರತ ಸರ್ಕಾರದ ಭಾರತ ವಿಶಿಷ್ಟ ಗುರುತು ಪ್ರಾಧಿಕಾರವು (ಯುಐಡಿಎಐ) ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಈವರೆಗೆ ಸುಮಾರು 130 ಕೋಟಿ ಭಾರತದ ಎಲ್ಲಾ ನಿವಾಸಿಗಳಿಗೆ ಆಧಾರ್ ಅನು ನೀಡಲಾಗಿದ್ದು, ಭಾರತ ಸರ್ಕಾರವು ಆಧಾರ್ ನೋಂದಣಿ ಮತ್ತು ತಿದ್ದುಪಡಿ ಪ್ರಕ್ರಿಯೆಯನು ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಎಲ್ಲಾ ರಾಜ್ಯಗಳಲ್ಲಿ ನಿರ್ವಹಿಸುತ್ತಿರುತ್ತದೆ. ಕರ್ನಾಟಕ ರಾಜ್ಯದ ನಿವಾಸಿಗಳಿಗೆ ಇಲ್ಲಿಯವರೆಗೆ ಸುಮಾರು 6.68 (ಶೇಕಡ 98.8) ಕೋಟಿ ನಿವಾಸಿಗಳಿಗೆ ಆಧಾರ್ ಅನ್ನು ವಿತರಿಸಲಾಗಿರುತ್ತದೆ.

ರಾಜ್ಯದಲ್ಲಿ ಆಧಾರ್ ನೋಂದಣಿ ಮತ್ತು ತಿದ್ದುಪಡಿ ಕಾರ್ಯಗಳನು ರಾಜ್ಯ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ), ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಕೇಂದ್ರ ಸರ್ಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಚೆ ಕಛೇರಿ, ಬ್ಯಾಂಕ್, ಬಿ.ಎಸ್.ಎನ್.ಎಲ್. ಕಛೇರಿಗಳು ನಿರ್ವಹಿಸುತಿರುತ್ತವೆ. ಪ್ರಸ್ತುತ ಆಧಾರ್ ನೋಂದಣಿ ಮತ್ತು ತಿದ್ದುಪಡಿಗಳನ್ನು ಭಾರತ ವಿಶಿಷ್ಟ ಗುರುತು ಪ್ರಾಧಿಕಾರದ ವತಿಯಿಂದ ಸೈಜಿಸ್ ನಿರ್ವಹಿಸುತ್ತಿರುವ CELC (Child enrolment lite client) ಮತ್ತು ECMP (Enrolment client multi-platform) ತಂತ್ರಾಂಶಗಳ ಮೂಲಕ ಮಾಡಲಾಗುತ್ತಿದೆ. ಸದರಿ ತಂತ್ರಾಂಶಗಳಲ್ಲಿ ಆಧಾರ್ ನೋಂದಣಿ/ ತಿದ್ದುಪಡಿ ಮಾಡುವಾಗ ನಿವಾಸಿಗಳ ವೈಯಕ್ತಿಕ ಮಾಹಿತಿಯನು ಆಂಗ್ಲ ಭಾಷೆಯಲ್ಲಿ ನಮೂದಿಸಲಾಗುತ್ತಿದ್ದು, ಸದರಿ ಮಾಹಿತಿಯು ಕನ್ನಡಕ್ಕೆ ಸ್ವಯಂಚಾಲಿತವಾಗಿ ಅನುವಾದಗೊಳ್ಳುವುದು. ಆದಾಗ್ಯೂ, ತಂತ್ರಾಂಶದಲ್ಲಿ ಅನುವಾದಗೊಂಡ ಕನ್ನಡ ಮಾಹಿತಿಯನ್ನು ತಿದ್ದುಪಡಿ ಮಾಡಲು ಕೂಡ ಅವಕಾಶವಿರುತ್ತದೆ.

ಮುಂದುವರೆದು, CELC ಮತ್ತು ECMP ತಂತ್ರಾಂಶಗಳಲ್ಲಿ ಆಧಾರ್ ನೋಂದಣಿ/ ತಿದ್ದುಪಡಿ ಮಾಡುವ ಸಂದರ್ಭದಲ್ಲಿ ಆಧಾರ್ ಆಪರೇಟರ್‌ಗಳು ನಮೂದಿಸಲಾದ ನಿವಾಸಿಯ ವೈಯಕ್ತಿಕ ಮಾಹಿತಿಯನ್ನು ಪರಿಶೀಲನೆಗಾಗಿ ನೋಂದಣಿದಾರರಿಗೆ ಪ್ರದರ್ಶಿಸಿ ಖಚಿತಪಡಿಸಿಕೊಂಡ ನಂತರ ಪ್ರಕ್ರಿಯೆ ಮುಂದುವರೆಸುವುದು. ಈ ಹಿನ್ನಲೆಯಲ್ಲಿ ನೋಂದಣಿ/ ತಿದ್ದುಪಡಿಯಾದ ಆಧಾರ್ ಕಾರ್ಡ್ ನಲ್ಲಿನ ನಿವಾಸಿಗಳ ಮಾಹಿತಿಯು ಆಂಗ್ಲ ಮತ್ತು ಕನ್ನಡ ಭಾಷೆಗಳ ನಡುವೆ ವ್ಯತ್ಯಾಸವಿರುವುದು ಅವಕಾಶವಿರುವುದಿಲ್ಲ. ಆದಾಗ್ಯೂ, ಸದರಿ ಸಮಸ್ಯೆಯನು ಸುಧಾರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಆಧಾರ್ ರಿಜಿಸ್ಟ್ರಾರ್ ಗಳಿಗೆ ಕಳುಹಿಸಲಾಗುವುದು.

ಭಾರತ ವಿಶಿಷ್ಟ ಗುರುತು ಪ್ರಾಧಿಕಾರವು ತಮ್ಮ ದತ್ತಾಂಶದಲ್ಲಿ ಭಾರತ ಅಂಚೆ ಇಲಾಖೆಯು ಕಾಲಕಾಲಕ್ಕೆ ನೀಡುವ ಪಿನ್ ಕೋಡ್‌ಗಳ ಮಾಹಿತಿಯನು ಇಂದೀಕರಿಸಲಾಗಿರುವುದರಿಂದ ರಾಜ್ಯ ಸರ್ಕಾರಕ್ಕೆ ಸದರಿ ದತ್ತಾಂಶದಲ್ಲಿ ಇಂದೀಕರಿಸಲು ಯಾವುದೇ ನಿಯಂತ್ರಣವಿರುವುದಿಲ್ಲ. ಆದ್ದರಿಂದ ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಕಸಬಾ ಹೋಬಳಿಯ ಎಸ್.ಕೊಡಗೀಹಳ್ಳಿ ಗ್ರಾಮದ ಪಿನ್‌ಕೋಡ್ 572213 ಆಗಿದ್ದು, ಆ ಗ್ರಾಮದ ನಿವಾಸಿಗಳು ಆಧಾರ್ ನಮೂದಿಸುವಾಗ ಎಸ್. ಕೊಡಗೀಹಳ್ಳಿ ಬದಲಿಗೆ ಸಿ. ಕೊಡಗೀಹಳ್ಳಿ ಎಂದು ಆಧಾರ್ ನಮೂದುಗೊಳ್ಳುವ ಬಗ್ಗೆ ಕೂಡಲೇ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಭಾರತ ವಿಶಿಷ್ಟ ಗುರುತು ಪ್ರಾಧಿಕಾರವನ್ನು ಕೋರಲಾಗುವುದು.

ಕಡತ ಸಂಖ್ಯೆ: ಸಿಆಸುಇ 51 ಪಿಆರ್ ಜೆ 2022

(ಬಸವರಾಜ ಬೊಮ್ಮಾಯಿ)
ಮುಖ್ಯ ಮಂತ್ರಿ



Generated from eOffice by G JAGADEESHA, CMO-JS(GJ), JOINT SECREATRY, CMO on 18/03/2022 05:24 PM